ಎಂ.ಬಿ. ಖೋದಾನಪುರ, ಸವದತ್ತಿ

*ಸದಾಕಾಲ ನಗುವವರನ್ನು ಏನೆಂದು ಕರೆಯಬೇಕು?*



ಸದಾನಂದಗೌಡರು!

ಸಾರಂಗ್, ಬೆಂಗಳೂರು

*ಸರಹದ್ದು ಎಂದರೇನು?*

ಸರ ಕಂಡಾಕ್ಷಣ ಹದ್ದಿನಂತೆ ಎರಗುವವನು chain snatcher!

ಪಿ.ಜೆ. ರಾಘವೇಂದ್ರ, ಮೈಸೂರು

*ಮಹಾತ್ಮ ಗಾಂಧಿ ರಸ್ತೆಯಲ್ಲಿ ಹೆಚ್ಚಾಗಿ ತುಂಡುಬಟ್ಟೆ ತೊಟ್ಟ ಲಲನೆಯರೇ ಓಡಾಡುತ್ತಿರುತ್ತಾರಲ್ಲಾ ರಾಮ್?*

ಎಂ.ಜಿ. ರಸ್ತೆ ಎಂದರೆ ಮಿನಿ ಗಾರ್ಮೆಂಟ್ಸ್ ರಸ್ತೆ ಎಂದುಕೊಂಡಿದ್ದಾರಂತೆ!

ಕಾಳೀಹುಂಡಿ ಶಿವಕುಮಾರ್, ಮೈಸೂರು

*ಮುಖ ನೋಡದೆ ಲವ್ ಮಾಡುವುದಕ್ಕೂ, ಜಾತಕ ನೋಡದೆ ಮದುವೆ ಆಗುವುದಕ್ಕೂ ವ್ಯತ್ಯಾಸವೇನು?*

ಏನೇನೂ ಇಲ್ಲ; ಮನಿ ಛಲೋ ಇದ್ರ ಶನಿ ಆದ್ರೂ ಸೈಯಂತ!

ಅಜಿತ್ ಸಾಲ್ಯಾನ್, ಕಾಡಿಪಟ್ಣ

*ಸಿನೆಮಾಗಳಲ್ಲಿ ಹೆಚ್ಚಾಗಿ ನಾಯಕ ಖಳನಾಯಕನ ಮಗಳನ್ನೇ ವರಿಸುವುದೇಕೆ?*

ಮಾವ ಜೈಲಿಗೆ; ಮಾವನ ಮಗಳು, ಮನೆ, ಆಸ್ತಿ ತನಗೆ ದೊರೆಯುವುದರಿಂದ!

ಎಸ್.ಎನ್.ಮಹಾಬಲರಾವ್, ನರಸಿಂಹರಾಜಪುರ

*ಹುಡುಗಿಯ ಬೆರಳು ಸೋಕಿದಾಗ ಕರೆಂಟ್ ಹೊಡೆದಂತಾಯಿತು?*



ಕೈಹಿಡಿದರೆ – ಕರೆಂಟ್ ಹೊಡೆದ ಹಾಗೆ!

ಪ್ರಹ್ಲಾದರಾಜು ಬುರ್ಲಿ, ದಾವಣಗೆರೆ

*ನಿಶ್ಚಿತಾರ್ಥ, ಮದುವೆ, ಮುಂಜಿ ಮುಂತಾದ ದೊಡ್ಡದೊಡ್ಡ ಸಮಾರಂಭಗಳಲ್ಲಿ ಹೆಂಗಸರೇಕೆ ಅಡುಗೆ ಮಾಡುವುದಿಲ್ಲ?*

ಶಾಖಕ್ಕೆ ಮೇಕಪ್ ಢಮಾರ್ ಆಗುವುದರಿಂದ ಅಲ್ಲಿ ಅವರ ಬೇಳೆ ಬೇಯುವುದಿಲ್ಲವಂತೆ!

ಮಲ್ಲಿಕಾರ್ಜುನ ಆರ್. ಹುಲಗಬಾಳಿ, ಬನಹಟ್ಟಿ

*ಬಾ ಅಂದ್ರೆ ಬಾರದೆ, ಬರಬೇಡ ಅಂದರೂ ಬಂದೇಬಿಡುವುದು ಯಾವುದು ರಾಮ್‌ಜೀ?*

ಕರೆಂಟ್! ಬೇಕಿದ್ದಾಗ ಇರುವುದಿಲ್ಲ, ಸಾಕೆಟ್ ಕ್ಲೀನ್ ಮಾಡಲು ಕಂಬಿ ತೂರಿಸಿದತಕ್ಷಣ ಬಂದುಬಿಡುತ್ತದೆ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

*ಚಿನ್ನಕ್ಕೆ ಹೊಳಪಿರಬೇಕು; ಹೆಣ್ಣಿಗೆ ಗುಣವಿರಬೇಕು, ಮಣ್ಣಿಗೆ?*

ನನ್ನಂತಹ ಮಗನಿರಬೇಕು ಎಂದರಂತೆ ಗೌಡರು!

ನರಸಿಂಹ ಎಂ. ಪೈ, ಹೊನ್ನಾವರ

*ದುಡಿತ ದುಡ್ಡಿನ ತಾಯಿಯಾದರೆ, ಕುಡಿತ?*

ಅದೇ ದುಡ್ಡಿಗೆ ಹುಟ್ಟಿದ ಕುಲಗೆಟ್ಟ ಮಗ!

ಮೊಳಕಾಲ್ಮೂರು ಸುರೇಶ, ಬಳ್ಳಾರಿ

*ಮದುವೆ ಎಂಬ ಖೆಡ್ಡಾಗೆ ಬೀಳಿಸಲು ಕನ್ಯಾಪಿತೃಗಳು ಬಯಸುವುದರ ರಹಸ್ಯ?*

ತಮ್ಮ ಕಾಡಲ್ಲಿ ಬೆಳೆದ ಆನೆಯನ್ನು ಮಾವನ ಮನೆಯೆಂಬ ಝೂಗೆ ಕಳುಹಿಸುವ ತವಕ!

ಮೈ.ನಾ. ಸೋಮಶೇಖರ್, ಮೈಸೂರು

*ಓ ಚಂಚಲತೆ, ನಿನ್ನ ಹೆಸರೇ ಸ್ತ್ರೀಯಲ್ತೆ ಎಂಬುದು ಇಂದಿಗೂ ಪ್ರಸ್ತುತವೇ?*

ಕೊಂಚ ಬದಲಾಯಿಸಿ – ಓ ಮೊಬೈಲ್ ಲತೆ, ನಿನ್ನ ಉಸಿರೇ mall ಅಲ್ತೆ!

ಜಾಕೋಬ್ ಡಿಸೋಜ, ಕುರುವಳ್ಳಿ

*ಮೂರ್ತಿ ಚಿಕ್ಕದಾದರೆ ಕೀರ್ತಿ ದೊಡ್ಡದು; ಕೀರ್ತಿ ಚಿಕ್ಕದಾದರೆ...?*

ಅಪಕೀರ್ತಿ ದೊಡ್ಡದು!

ಗೀತಾ ಬರ್ಲ, ಬೆಂಗಳೂರು

*ವಿವಾಹ ಬಾಳಿನ ಹೊಂಗಿರಣ ಎನ್ನುತ್ತಾರೆ, ಹೌದೆ?*

ಅಕ್ಕಸಾಲಿಗನಿಗಂತೂ ಹೌದು!

ಶ್ವೇತಾಲಕ್ಷ್ಮಿ ಅಮ್ಮೆ, ಬೆಂಗಳೂರು

*ವಿದ್ಯೆ ಇಲ್ಲದವ ಹದ್ದಿಗಿಂತ ಕಡೆ ಎನ್ನುತ್ತಾರೆ; ಆದರೆ ಕೆಲವು ವಿದ್ಯಾವಂತರು ಹದ್ದಿಗಿಂತ ಕೀಳಾಗಿ ವರ್ತಿಸುವರಲ್ಲಾ?*

ಸರಿಯೇ; ಅವರು ಹದ್ದು ಮೀರಿದವರು!

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ

*ಮನೆಗೆ ಅತಿಥಿಗಳು ಬಂದರೆ ಭಾರವಾಗುತ್ತಾರೆ; ಆದರೆ ಆಸ್ಪತ್ರೆಗಳಲ್ಲಿ ರೋಗಿಗಳು ನಮ್ಮ ಅತಿಥಿಗಳು ಎನ್ನುವರಲ್ಲಾ?*

ಅವರಿಗೂ ಭಾರವಾಗುತ್ತಾರೆ; ಅದಕ್ಕೇ ಅವರು ಇವರನ್ನು ನಾಲ್ಕು ಜನರ ಹೆಗಲಿಗೆ ಏರಿಸುವುದು!

## ಬಹುಮಾನಿತ ಪ್ರಶ್ನೆ

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು

*ಎಲ್ಲಾ ರೀತಿಯ ವಾಹನಗಳು ಹುಡುಗಿಯರ ಕಾಲೇಜಿನ ಮುಂದೆ ನಿಧಾನವಾಗಿ ಚಲಿಸಲು ಕಾರಣವೇನು?*

ಹುಡುಗಿಯರ ಕೆಂದುಟಿಗಳನ್ನು ತಪ್ಪಾಗಿ ರೆಡ್ ಸಿಗ್ನಲ್ ಎಂದುಕೊಳ್ಳುವರಂತೆ!

ಕೊಕ್ಕಡ ವೆಂಕಟ್ರಮಣ ಭಟ್, ಮಂಡ್ಯ

*ಅಂದಿನ ಅಹಲ್ಯಾ, ಮಂಡೋದರಿ, ದ್ರೌಪದಿ, ಸೀತೆ, ತಾರೆಯರೆಲ್ಲಾ ಪತಿವ್ರತೆಯರಂತೆ; ಈಗಿನ ತಾರೆಯರು?*

ಪತಿ–ವ್ಯಥೆಯರು!

ಆರ್. ವಿಜಯಲಕ್ಷ್ಮಿ, ಕೊಳ್ಳೇಗಾಲ

*ಅನಂತಪದ್ಮನಾಭಸ್ವಾಮಿಯ ದೇವಾಲಯದಲ್ಲಿ ನಿಧಿ ಕಾಯುತ್ತಿದ್ದ ಹಾವುಗಳು ಇಲ್ಲಿಯವರೆಗೆ ಎಷ್ಟು ಕಾಣಿಸಿಕೊಂಡವು?*

ಬೇಗ ಹೇಳಿ– ಧರ್ಮಾಧಿಕಾರಿಗಳು, ಪೂಜಾರಿಗಳನ್ನು ಸೇರಿಸಿ ಲೆಕ್ಕ ಹೇಳಬೇಕೋ, ಬಿಟ್ಟೋ?

ವಾ. ಮುರಳೀಧರ, ತೀರ್ಥಹಳ್ಳಿ

*ಗುಟ್ಕಾ ಎಂಬ ವಿಷವನ್ನು ಪ್ಲಾಸ್ಟಿಕ್ ಸ್ಯಾಚೆಯ ಬದಲು ಕಾಗದದ ಪೊಟ್ಟಣದಲ್ಲಿ ನೀಡಿದರೆ ಅಮೃತವಾದೀತೆ?*




ಪ್ಲಾಸ್ಟಿಕ್ ಅ–ಮೃತ(ಸಾವಿಲ್ಲದ್ದು), ಕಾಗದ ಮೃತ; ಮೃತ್ಯುವಿಗೆ ಮೃತವೇ ಮ್ಯಾಚಿಂಗ್!

ನವಿರವಿ, ಚಿಕ್ಕಮಗಳೂರು

*ಶಿವ ಗಣಪನ ತಲೆ ಕಡಿದಾಗ ಗಣಪನ ತಲೆಯನ್ನೇ ಜೋಡಿಸದೆ ಆನೆ ತಲೆಯನ್ನೇ ಯಾಕೆ ಜೋಡಿಸಿದರು?*

ಮೊದಲೇ ಕೊಳೆಯಿಂದ ಮಾಡಿದ ತಲೆ ನೆಲಕ್ಕೆ ಬಿದ್ದು ತೊಳೆಯಲಾಗದಷ್ಟು ಕೊಳೆಯಾಗಿತ್ತಂತೆ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ಪರಿಸರ ಮಲಿನವಾದರೆ ಕಷ್ಟಕ್ಕೆ ಒಳಗಾಗುತ್ತೇವೆ. ಪಕ್ಷ ಮಲಿನವಾದರೆ?*

ತರ್ಪಣ ಬಿಡುತ್ತೇವೆ!

ರಾಮ್